**ಎಮ್ ವಿ ಸಿ ನಂಃ 889/2023**
**ಆರ್.ಡಬ್ಲ್ಯೂಃ 1,**

**ಸಾಕ್ಷಿಯನ್ನು ದಿನಾಂಕ : 23-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್. -1- ಪಾಲಸಿ ಕಾಫಿ ನಕಲು

**ಪಾಟಿ ಸವಾಲು: ಶ್ರೀ. ವಿ.ಎಸ್. ಆರ್. ಅರ್ಜಿದಾರ ಪರ ವಕೀಲರಿಂದ :**

ನಾನು ಅಂತಿಮ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಂತಿಮ ವರದಿ ಪ್ರಕಾರ ವಿಮೆ ಹೊಂದಿದ ಕೆ.ಎ.-32-ಇನ್-0570 ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸುಳ್ಳು ಎಂದು ನುಡಿಯುತ್ತಾರೆ. ಕೆ.ಎ.-32-ಇನ್-0570 ಅಪಘಾತ ಪಡಿಸಿದ ಈ ವಾಹನ ನಮ್ಮ ವಿಮೆಯ ಷರತ್ತುಗಳನ್ನು ಉಲ್ಲಂಘಿಸಿಲ್ಲಾ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅಪಘಾತ ಪಡಿಸಿದ ವಾಹನ ಮಾಲಿಕ ನಮಗೆ ತಿಳಿಸಿಲ್ಲಾ ಅಂತಾ ಒಂದೇ ಕಾರಣಕ್ಕೆ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲಿಕ ನಮ್ಮ ಕಂಪನಿಗೆ ಬೇಕಾದ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದರು ಅವುಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಅಂತಿಮ ವರದಿ ಪ್ರಕಾರ ಅರ್ಜಿದಾರರ ವಾಹನಕ್ಕೆ ಕೆ.ಎ.-32-ಇನ್-0570 ವಾಹನ ಹಿಂದಿನಿಂದ ಬಂದು ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ. ಕೆ.ಎ.-32-ಇನ್-0570 ವಾಹನ ಅರ್ಜಿದಾರರ ವಾಹನಕ್ಕೆ ಹಿಂದಿನಿಂದ ಬಂದು ಡಕ್ಕಿ ಪಡಿಸಿದ ಕಾರಣ ಆತನ ಬೇಜವಾಬ್ದಾರಿತನದಿಂದ ಅಪಘಾತ ಆಗಿದ್ದು ನಾವು ಪರಿಹಾರ ಕೊಡಲು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲಾ ಎಂದರೆ ಸರಿಯಲ್ಲ.

ನಿಪಿ-3 ಮಹಜರ ಪ್ರಕಾರ ಅಪಘಾತ ಸ್ಥಳವನ್ನು ರಸ್ತೆ ಸಂಪೂರ್ಣ ಎಡಬದಿಗೆ ಆಗಿದೆ ಎಂದು ತೋರಿಸಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರ ವಾಡಿ ಇಂದ ಮಾಲಗತ್ತಿ ಕ್ರಾಸ ಮೂಲಕ ಕಲಬುರಗಿಗೆ ಹೊರಟಿದ್ದ. ನಿಪಿ-2 ಪ್ರಕಾರ ಅರ್ಜಿದಾರ ಮೋಟಾರ ಸೈಕಲ ಮೇಲೆ ಹೊರಟಾಗ ಮಾಲಗತ್ತಿ ಕ್ರಾಸ ಬಳಿ ಫೋನ ಬಂದ ಕಾರಣ ಆತನು ತನ್ನ ಬೈಕನ್ನು ಸೈಡಗೆ ನಿಲ್ಲಿಸಿ ನಿಂತಾಗ ಒಂದು ಬೈಕ ಬಂದು ಹಿಂದಿನಿಂದ ಬಂದು ಗುದ್ದಿರುತ್ತದೆ ಎಂದರೆ ಸರಿಯಲ್ಲ . ಸದರಿ ನಿಪಿ-2 ಪ್ರಕಾರ ಅಪಘಾತವು ರಸ್ತೆಯ ಎಡಬದಿಯಲ್ಲಿ ಆಗಿದ್ದು, ಮಧ್ಯಭಾಗದಲ್ಲಿ ಅಲ್ಲಾ ಎಂದರೆ ಸರಿಯಲ್ಲ . ಪರಿಹಾರ ನೀಡಲು ನಾವು ಭಾಧ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**